ನಿಮ್ನೊಡನೆ

# ಮಕ್ಕಳ ಶಿಕ್ಷಣ ಹಕ್ಕಿನ ಪ್ರಹಸನ

> 2014ರ ಜನಗಣತಿ ರಾಜ್ಯದಲ್ಲಿ 1.70 ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂದು ಹೇಳಿತ್ತು. ಆದರೆ ಮಕ್ಕಳ ಕೊರತೆಯ ನೆಪದಲ್ಲಿ ಸರ್ಕಾರ ಎಗ್ಗಿಲ್ಲದೆ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದೆ. ಹಾಗಾದರೆ ಸಂವಿಧಾನದತ್ತ ಶೈಕ್ಷಣಿಕ ಹಕ್ಕಿನಿಂದ ಮಕ್ಕಳನ್ನು ವಂಚಿಸಿ ಅಸಮಾನ ಸಮಾಜ ನಿರ್ಮಾಣ ಮಾಡಿದಂತೆ ಆಗುವುದಿಲ್ಲವೇ?

ಮಕ್ಕಳ ಕೊರತೆಯ ನೆಪದಲ್ಲಿ ರಾಜ್ಯ ಸರ್ಕಾರ ಯಾವುದೇ ಎಗ್ಗಿಲ್ಲದೆ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದೆ. ಇನ್ನೊಂದು ಕಡೆ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿಯೇ ಇದೆ. ಇದು ರಾಜ್ಯದಲ್ಲಿನ ಶಿಕ್ಷಣ ವ್ಯವಸ್ಥೆಯ ವೈರುಧ್ಯ. ಮಕ್ಕಳನ್ನು ಶಾಲೆಗೆ ಮರಳಿ ಕರೆತರಲು ಸರ್ಕಾರ ಏನೆಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ನಂತರವೂ ಲಕ್ಷಾಂತರ ಮಕ್ಕಳು ಶಾಲೆಗಳ ಹೊರಗೆ ಉಳಿದಿದ್ದಾರೆ. 1.20 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಶಾಲೆಗೆ ಮರಳಿ ಕರೆತರಲಾಗಿದೆ ಎಂದು ಸರ್ಕಾರಿ ಅಂಕಿಅಂಶಗಳು ಹೇಳುತ್ತಿದ್ದರೂ, ಈ ಅಂಕಿಅಂಶಗಳು ಎಷ್ಟು ವಿಶ್ವಾಸಾರ್ಹವಾಗಿರುತ್ತವೆ ಎನ್ನುವುದು ಎಲ್ಲರಿಗೂ ಗೊತ್ತು.

‘ಸರ್ವ ಶಿಕ್ಷಣ ಅಭಿಯಾನ’ದಡಿ ಇತ್ತೀಚೆಗೆ ನಡೆದಿರುವ ಸಮೀಕ್ಷೆಯೊಂದು ಸಾವಿರಾರು ಮಕ್ಕಳು ಈಗಲೂ ಶಾಲೆಗಳಿಂದ ಹೊರಗುಳಿದಿದ್ದಾರೆ ಎಂದು ಹೇಳಿದೆ. ಕಲಬುರಗಿ, ಯಾದಗಿರಿಗಳ ಜೊತೆಗೆ ಮೈಸೂರು, ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ ಕೂಡ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಕಾರ್ಯಕ್ರಮಗಳು ಅಷ್ಟೇನೂ ಯಶಪಡೆದಿಲ್ಲ. 7ರಿಂದ 13 ವರ್ಷದೊಳಗಿನ ಈ ಮಕ್ಕಳು ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಯಾಚೆಯೇ ಉಳಿದಿದ್ದಾರೆ. ‘ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ’ದ ಪ್ರಕಾರ – ಹೋಟೆಲ್, ಗ್ಯಾರೇಜ್, ಬ್ಯಾಗ್ ತಯಾರಿಕೆ, ಗಾರ್ಮೆಂಟ್‌ಗಳಂತಹ ಕೈಗಾರಿಕೆಗಳಲ್ಲಿ ಸಾವಿರಾರು ಮಕ್ಕಳು ತಮ್ಮ ಬಾಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಅಪ್ಪ–ಅಮ್ಮ ಇಬ್ಬರೂ ದುಡಿಯಲು ಹೊರಗೆ ಹೋಗುವುದರಿಂದ, ಶಾಲೆಗೆ ಹೋಗಬೇಕಾದ ಮಕ್ಕಳು ಮನೆಯಲ್ಲಿನ ಎಳೆಯ ಕೂಸುಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ನಿದರ್ಶನಗಳೂ ಸಾಕಷ್ಟಿವೆ. ಇಂಥ ಮಕ್ಕಳನ್ನು ‘ಶಾಲೆ ಕಡೆ ನನ್ನ ನಡೆ’ ಕಾರ್ಯಕ್ರಮದ ಮೂಲಕ ಮರಳಿ ಶಾಲೆಯ ಸೂರಿಗೆ ಕರೆತರುವ ಪ್ರಯತ್ನಗಳು ನಡೆದಿವೆ. ಸರ್ಕಾರದ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ನಡೆಯುವ ಈ ಕಾರ್ಯಕ್ರಮಗಳು, ಮಕ್ಕಳ ಶಿಕ್ಷಣದ ಕುರಿತು ಜನರಲ್ಲಿ ಅರಿವು ಮೂಡಿಸುವ ಉದ್ದೇಶವನ್ನೂ ಹೊಂದಿವೆ.

ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಸಾಮಾಜಿಕ ತಾರತಮ್ಯದ ವ್ಯಕ್ತರೂಪದಲ್ಲಿಯೂ ನೋಡಬಹುದು. ಅಲ್ಪಸಂಖ್ಯಾತರು, ದಲಿತರು ಹಾಗೂ ಆರ್ಥಿಕವಾಗಿ ಹಿಂದುಳಿದವರ ಮಕ್ಕಳೇ ಹೆಚ್ಚಿನ ಪ್ರಮಾಣದಲ್ಲಿ ಶಾಲೆಯಿಂದ ಹೊರಗುಳಿದಿರುತ್ತಾರೆ. ಜೀವನೋಪಾಯಕ್ಕಾಗಿ ಅಲೆಮಾರಿಗಳಾದ ಕುಟುಂಬಗಳ ಮಕ್ಕಳು ಕೂಡ ಶಿಕ್ಷಣದ ಸವಲತ್ತಿನಿಂದ ವಂಚಿತರಾಗುತ್ತಾರೆ.

ಕಲಿಯುವ ವಯಸ್ಸಿನ ಮಕ್ಕಳು ಶಾಲೆಯಿಂದ ಹೊರಗೇ ಉಳಿಯುವುದು ನಮ್ಮ ದೇಶದ ಶಿಕ್ಷಣ ವ್ಯವಸ್ಥೆಗೆ ಅಂಟಿಕೊಂಡಿರುವ ಕಳಂಕ. 6ರಿಂದ 14 ವರ್ಷದೊಳಗಿನ 60 ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ ಎಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಸಮೀಕ್ಷೆಯೊಂದು ತಿಳಿಸಿತ್ತು. ಆದರೆ, ಹತ್ತು ವರ್ಷಗಳ ಹಿಂದೆ ಈ ಸಂಖ್ಯೆ 1.34 ಕೋಟಿಯಷ್ಟಿತ್ತು ಎನ್ನುವುದನ್ನು ನೆನಪಿಸಿಕೊಂಡರೆ ಪರಿಸ್ಥಿತಿ ಈಗ ಕೊಂಚ ಸುಧಾರಿಸಿದೆ ಎನ್ನಬಹುದು. 2014ರ ಜನಗಣತಿ ರಾಜ್ಯದಲ್ಲಿ 1.70 ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆಗಳಿಂದ ವಂಚಿತರಾಗಿದ್ದಾರೆ ಎಂದು ಹೇಳಿತ್ತು. ಆದರೆ, ಈ ಗಣತಿಯ ಆಸುಪಾಸಲ್ಲೇ ನಡೆದ ಸಮೀಕ್ಷೆಯೊಂದು 2.24 ಲಕ್ಷ ಮಕ್ಕಳು ಶಾಲೆಯಿಂದ ಹೊರಗುಳಿದಿರುವ ಆಘಾತಕಾರಿ ಸುದ್ದಿ ನೀಡಿತ್ತು. ಹೈಕೋರ್ಟ್ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಸಮಿತಿ ಈ ಸಮೀಕ್ಷೆ ನಡೆಸಿತ್ತು. ಸರ್ಕಾರದ ವರದಿಗಳೇ ತದ್ವಿರುದ್ಧ ಅಂಕಿಅಂಶಗಳನ್ನು ನೀಡುವುದನ್ನು ನೋಡಿದರೆ, ‘ಮಕ್ಕಳ ಶಿಕ್ಷಣ ಹಕ್ಕು’ ಎನ್ನುವುದನ್ನು ಸರ್ಕಾರಿ ವ್ಯವಸ್ಥೆ ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎನ್ನುವುದು ತಿಳಿಯುವಂತಿದೆ.

ದೊಡ್ಡ ಸಂಖ್ಯೆಯ ಮಕ್ಕಳು ಶಾಲೆಗಳಿಂದ ಹೊರಗುಳಿದಿರುವುದರ ಜೊತೆಗೆ, ಆ ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆಯನ್ನೂ ಗಮನಿಸಬೇಕು. ಗ್ರಾಮೀಣ ಪ್ರದೇಶಗಳ ಬಹುತೇಕ ಶಾಲೆಗಳ ಪಾಲಿಗೆ ಮೂಲಭೂತ ಸೌಕರ್ಯ ಎನ್ನುವುದು ಐಷಾರಾಮಿ ಪರಿಕಲ್ಪನೆಯಾಗಿಯೇ ಉಳಿದಿದೆ. ರಾಜ್ಯದ 10 ಸಾವಿರಕ್ಕೂ ಹೆಚ್ಚು ಶಾಲೆಗಳು ಮೂರು ಕೊಠಡಿಗಳನ್ನು ಹೊಂದಿದ್ದರೆ, 14 ಸಾವಿರಕ್ಕೂ ಹೆಚ್ಚು ಶಾಲೆಗಳು ಎರಡು ಕೊಠಡಿಗಳನ್ನು ಹೊಂದಿವೆ. ಒಂದೇ ಒಂದು ಕೊಠಡಿಯನ್ನು ಹೊಂದಿರುವ ಶಾಲೆಗಳು 2 ಸಾವಿರಕ್ಕೂ ಹೆಚ್ಚಾಗಿವೆ. ಕೊಠಡಿಯನ್ನೇ ಹೊಂದಿರದ ಶಾಲೆಗಳು ಕೂಡ ನೂರಾರು ಸಂಖ್ಯೆಯಲ್ಲಿವೆ ಎನ್ನುವುದು ನಮ್ಮ ಶಿಕ್ಷಣ ವ್ಯವಸ್ಥೆಯ ‘ವೈಭವ’ವನ್ನು ಸೂಚಿಸುವಂತಿದೆ. ಕೆಲವು ಶಾಲೆಗಳಲ್ಲಿ ಕೊಠಡಿಗಳ ಸಂಖ್ಯೆ ಇರಲಿ, ಶಿಕ್ಷಕರಿಗೆ ಬರೆಯಲು ಸೀಮೆಸುಣ್ಣ ಕೂಡ ಇಲ್ಲ. ಇಂಥ ಪರಿಸರದಲ್ಲಿ ಮಕ್ಕಳನ್ನು ಶಾಲೆಗೆ ಕರೆತಂದು ಕಲಿಸುವ ಪ್ರಹಸನ ನಡೆಸಬೇಕಾಗಿದೆ. ನಮ್ಮ ಮಕ್ಕಳ ‘ಭಾಗ್ಯ’ಕ್ಕೆ ಎಣೆಯೇ ಇಲ್ಲ!

■ ರಘುನಾಥ ಚ.ಹ.

